ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 213] ಶುಕ್ರವಾರ 30—7—48 [ಬಿಡಿ ಪ್ರತಿ 3 ಪೈ

ಸ್ವಾತಂತ್ರ್ಯ ದಿನಾಚರಣೆ

ಇದೇ ತಾ || 15 ರಲ್ಲಿ ಲಂಡನ್ನಿನಲ್ಲಿ ವೈಭವದಿಂದ ಜರುಗುವ ಭಾರತ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಏರ್ಪಡಿಸಿರುವ ಸಭೆಯಲ್ಲಿ ಲಾರ್ಡ್ ಲೂಯಿ ಮೌಂಟ್ ಬೇಟನ್ ಮತ್ತು ಸರ್ ಶ್ಯಾಫರ್ಡ್ ಕ್ರಿಪ್ಸ್ ಭಾಷಣ ಮಾಡುವರು.

ಇದೇ ಸರಿಯಾದ ಕಾರ್ಯಕ್ರಮ

ಹೈದರಾಬಾದಿನ ಬಗ್ಗೆ ಭಾರತ ಸರಕಾರ ಅನುಸರಿಸುತ್ತಿರುವ ನೀತಿ ತೃಪ್ತಿಕರವಾಗಿದೆ ಎಂದು ಬೊಂಬಾಯಿ ಪ್ರಧಾನಿ ಶ್ರೀ ಬಿ. ಜಿ ಖೇರ್ ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

ಗಾಂಧೀಜೀ ಸಲಹೆ ಪಡೆಯಬಹುದಿತ್ತು

ಸಂಯುಕ್ತ ರಾಷ್ಟ್ರದ ಕಾಶ್ಮೀರ ವಿಚಾರಣೆ ಸಮಿತಿ ಅಧ್ಯಕ್ಷ ಗಾಂಧೀಜೀ ಅಂತ್ಯ ಕ್ರಿಯೆಗಳು ಜರುಗಿದ ರಾಜಘಾಟಿಗೆ ನಿನ್ನೆ ಭೇಟಿ ಇತ್ತು ವುಷ್ಪ ಅರ್ಪಿಸಿದಾಗ, ಕಾಶ್ಮೀರ ಸಮಸ್ಯೆ ನಿವಾರಣೆ ಬಗ್ಗೆ ಗಾಂಧೀಜೀ ಬದುಕಿದ್ದರೆ ಅವರ ಸಲಹೆ ಪಡೆಯಬಹುದಾಗಿತ್ತು ಎಂದು

ಅರ್ಜಿಗಳು

ಸ್ವೀ ತಾ|| 2 ರಲ್ಲಿ ಶ್ರೀ ಪಿ. ರಾಮಯ್ಯ, ಶ್ರೀ ಪಿ. ಬಿ. ಶ್ರೀನಿವಸ ಮತ್ತು ಶ್ರೀ ಎಸ್. ಎಸ್. ಜುರವರ ರಿವಿಜ್ ಅರ್ಜಿಗಳ ವಿಚಾರಣೆ ಪ್ರಾರಂಭವಾಗುವುದೆಂದು ಗೊತ್ತಾಗಿದೆ. ಸುಪ್ರೀಂ ಕೋರ್ಟ್ ನ್ಯಾಯಸ್ಥಾನದ ಜಡ್ಜ್ಗಳಾದ ಮೇರೆ ಗೋಪಾಲರಾವ್ ವಿಚಾರಣೆ ಸಮಿತಿ ಕಾರ್ಯದರ್ಶಿಗಳ ವಿಳಾಸಕ್ಕೆ ನೋಟೀಸ್ ಕಳಿಸಲಾಗಿದೆಯೆಂದು ತಿಳಿದು ಬಂದಿದೆ.

Woodlands

30—7—48 ರಿಂದ

— ಬೆಳಗಿನ ಪ್ರದರ್ಶನ —

STAR OF ASIA

ಮಾಸ್ಟರ್ ವಿಠಲ್ ಜನಾಬಾಯಿ

ಪವಾರ್ ಪಾತ್ರವಹಿಸಿರುವ

ಸ್ಟಾರ್ ಆಫ್ ಏಷ್ಯಾ

ಅಮೋಘ ಹಿಂದಿ ಚಿತ್ರ

ನೋಡಲು ತಪ್ಪಿಸಬೇಡಿ

ಎ. ಎಐ. ಸಿ. ಸಿ. ಎರಡು ವಿರೋಧ ಪಕ್ಷಗಳ ಅಖಾಡ ಆಗುವುದು !

ಕ್ಷೌರಿಕರಿಗೆ ಕಡೇ ಎಚ್ಚರಿಕೆ

ಚಿಕ್ಕಮಗಳೂರು—ಸ್ಥಳೀಯ ನಗರ ನಿರ್ಮಲೀಕರಣದವರು ಎಂಟು ದಿವಸಗಳ ಕಾಲಾವಧಿಯನ್ನು (ತಾ|| 27 ರಿಂದು ಇತ್ತು, ಕ್ಷೌರಿಕರು ತಮ್ಮ ಮನೋಭಾವವನ್ನು ಬದಲಾಯಿಸಿ ಆಯುಷ್ಕರ್ಮಶಾಲೆಗಳಿಗೆ ನಗರ ನಿರ್ಮಲೀಕರಣದವರನ್ನು ಬಿಡಬೇಕೆಂದು ತಿಳಿಸಿರುವರು. ಆ ಅವಧಿಯ ವರೆಗೆ ತಾವು ನ್ಯಾಯಸ್ಥಾನ ಹತ್ತುವುದಿಲ್ಲವೆಂದು ತಿಳಿಸಿರುವರು. —

ಬೆಂಗಳೂರು ಪೌರಸಭೆಯವರು ಸ್ಥಾಪಿಸಲಿರುವ ಇಂಜನಿಯರಿಂಗ್ ಕಾಲೇಜಿಗೆ "ರಾಜಾಜಿ ಇಂಜನಿಯರಿಂಗ್ ಕಾಲೇಜು" ಎಂದು ನಾಮಕರಣ ಮಾಡಬೇಕು ಮತ್ತು ಆ ಕಾಲೇಜಿನ ಶಂಕುಸ್ಥಾಪನಾ ಮಹೋತ್ಸವವನ್ನು ಶ್ರೀ ರಾಜಾಜಿಯವರೇ ತಮ್ಮ ಅಮೃತಹಸ್ತದಿಂದ ನೆರವೇರಿಸಬೇಕು ಮತ್ತು ರಾಜಾಜಿಯನ್ನು ಸನ್ಮಾನಿಸುವ ಬಗ್ಗೆ ರೂ. 2000 ವ್ಯಯಿಸಬೇಕು ಎಂಬ ನಿರ್ಣಯಗಳು ನಿನ್ನೆ ಬೆಂಗಳೂರು ಪೌರಸಭೆಯಲ್ಲಿ ಸರ್ವಾನುಮತದಿಂದ ಅಂಗೀಕೃತವಾದವು.

ರಷ್ಯಾ ಸ್ಟಾಲಿನ್ನರ ಪುತ್ರ ಲೆ||ಜ|| ವ್ಯಾಸಿಲೆ ಸ್ಟಾಲಿನ್ನರು "ಫೈಟರ್ ಫೋರ್ಸ್" ಅಡಳಿತವನ್ನು ವಹಿಸಿಕೊಳ್ಳುವರು ಎಂದು ರಷ್ಯಾ ಪತ್ರಿಕೆಗಳು ಪ್ರಕಟಿಸಿವೆ.

ಆಗಸ್ಟ್ ತಾ|| 15 ರಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರು ವಿದ್ಯಾಸಂ ವಿಶ್ವವಿದ್ಯಾಲಯ ಘಟಿಕೋತ್ಸವ ಭಾಷಣ ಮಾಡುವರು.

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಸಂಕೇತವಾಗಿ ಸಂಸ್ಥಾನಾದ್ಯಂತ ಗಿಡ ನೆಡುವ ಸಮಾರಂಭ ಜರುಗಿತು.

ನಾಳೆ ದಿವಸ ಮತ್ತು ನಾಡಿದು ಬೆಂಗಳೂರು ವಿಶ್ವೇಶ್ವರಪುರ ಸಜ್ಜನರಾಯರ್ ಕಲ್ಯಾಣ ಮಂಟಪದಲ್ಲಿ ಸರ್ವಾವೇಶಗೊಳ್ಳುವ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ಕಾಂಗ್ರೆಸಿನ ಎರಡು ವಿರೋಧಪಕ್ಷಗಳಿಗೆ ಘರ್ಷಣೆ ನಡೆಯುವುದೆಂದು ಗೊತ್ತಾಗಿದೆ.

ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರವರು ಇನ್ನೂ ಅಡಳಿತದಲ್ಲಿರುವುದು ಮತ್ತು ಮಂತ್ರಿಮಂಡಲ ಮಾಡಿರುವ ಕೆಲಸಕಾರ್ಯಗಳು ಇವುಗಳೆಲ್ಲಾ ಈ ಅಧಿವೇಶನಕ್ಕೆ ಸಾಧಾರಣ ವಿಷಯ ಎಂದು ಗೊತ್ತಾಗಿದೆ.

ಅಖಿಲ ಭಾರತ ಕಾಂಗ್ರೆಸ್ಸಿಗೆ ಮೈಸೂರು ಕಾಂಗ್ರೆಸು ಅಡಕವಾಗುವ ವಿಷಯದಲ್ಲಿ ಮಾತ್ರ ಇಡೀ ಸಭೆಯಲ್ಲಿ ಅಲ್ಲೋಲ ಕಲ್ಲೋಲವಾಗುವುದೆಂದು ಗೊತ್ತಾಗಿದೆ.

ಶ್ರೀ ನಿಜಲಿಂಗಪ್ಪ ಮುಂತಾದವರು ಮಾತ್ರ ಮೈಸೂರು ಕಾಂಗ್ರೆಸ್ ಭಾರತ ಕಾಂಗ್ರೆಸ್ ಸೇರುವ ಒಗ್ಗೆ ಒಪ್ಪುತ್ತಾರೆಂದು ಗೊತ್ತಾಗಿದೆ

ಪೂರ್ವ ಪಂಜಾಬ್ ಪ್ರಾಂತ್ಯದಲ್ಲಿ 'ಮಹಾತ್ಮ ಗಾಂಧಿಯವರ ಕೊಲೆ ಅಥವಾ ಗೋಡ್ಸೆ ವಿಚಾರಣೆ ಎಂಬ ಸುದ್ದಿ ಚಲನಚಿತ್ರ ಪ್ರದರ್ಶಿಸಕೂಡದೆಂದು ಆ ಸರ್ಕಾರ ಪ್ರತಿಬಂಧಕಾಜ್ಞೆಯಿತ್ತಿದೆ.

ಅಂತರ್ರಾಷ್ಟ್ರೀಯ ಯುದ್ಧ ಪಾತಕಿ ಕೋರ್ಟ್ ನವರು ಜಪಾನ್ ಮಾಜೀ ಯುದ್ಧ ಮಂತ್ರಿ ಜನ|| ಟೋಜೋ ವಿಚಾರಣೆಯನ್ನು ಆಗಸ್ಟ್ ತಾ|| 2 ರಿಂದ ಆರಂಭಿಸುವರೆಂದು ಲಂಡನ್ ವರದಿ.

ಕಮ್ಯುನಿಸ್ಟ್ ಪಕ್ಷ 'ಡಕಾಯಿತಿಗಳ ಪಕ್ಷ ಎಂದು ನುಡಿದು ಕ್ಷಮಾಪಣೆ ಬೇಡಿದ 14 ಮಂದಿಯನ್ನು ವೆಲ್ಲೂರು ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡ

ಚಿಂತಾಮಣಿಯ
ಒಂದು ಸೇರಿನಂತೆ ಪ
ಕಳೆದ ವಾರ ಚಿಂತಾ
ತಲಾ ಒಂದು ಚಟ್ಟ
ಕೊಡಲಾಯಿತು.

ನಿಜಾಂರ ಹಾರಿತ

ನವದೆಹಲಿ ಜು 28—
ರ್ ಮಾಂಕ್ಟನ್ ಅಸ್ಮ
ಶ್ರೀ ರಿಚರ್ಡ್ ಬ್ಯೂಮೌಂಟ್
ಸುಂಕ ಅಧಿಕಾರಿಗಳಿಂದ ಶೋ
ಟ್ಟಾಗ ಅವರ ಒಳ ಒಂದು ಚಿನ್ನ
ಯೂರ ಮತ್ತು ಒಂದು ಚಿನ್ನದ
ಟ್ ಪೆನ್ನು ದೊರೆಯಿತು. ಇವು
ಅವರ ಸೇವೆಗಾಗಿ ನಿಜಾಮರು
ಪಾರಿತೋಷಕ ಎಂದು ಊಹಿಸಲಾ

ಆರೋಗ್ಯ ಸಚಿವರ ಪ್ರವಾಸ ಕಾರ್ಯಕ್ರಮ

ಮೈಸೂರು ಸಂಸ್ಥಾನದ ಆರೋ
ಮಂತ್ರಿಗಳು ನಾಳೆ ಮಧ್ಯಾಹ್ನ 1 ಗ
ಟೆಗೆ ಬೆಂಗಳೂರಿನಿಂದ ಬೊಂಬಾಯಿ
ತೆರಳುತ್ತಾರೆ. ಆಗಸ್ಟ್ ತಾ|| 1 ರ
ಬೊಂಬಾಯಿನಿಂದ ದೆಹಲಿಗೆ ತೆರಳ
ತ್ತಾರೆ. ತಾ|| 2 ರಿಂದ 5 ಆರೋಗ್ಯ
ಸಚಿವ ಸಮ್ಮೇಳನದಲ್ಲಿ ಭಾಗವಹಿಸುತ್ತಾ
ರೆ. ತಾ|| 6 ರಲ್ಲಿ ಮದ್ರಾಸಿಗೆ ಆಗಮ
ತ್ತಾರೆ. ತಾ|| 7 ರಲ್ಲಿ ಪ್ರಾತಃ
7 ಕ್ಕೆ ಬೆಂಗಳೂರಿಗೆ ಆಗಮಿ
ತ್ತಾರೆ. [ಪಿ.

ಇಂಜಕ್ಷನ್ ಅರ್ಜಿ ವಜಾ

ಕರಾಚಿ, ಜು 26—ಪಾಕಿಸ್ಥಾನದಿಂದ ಹೈದರಾಬಾದಿಗೆ ಔಷಧ ಸಾಮಾಗ್ರಿಗಳನ್ನು ಕೊಂಡೊಯ್ದ ಆಸ್ಟ್ರೇಲಿಯಾ ವೈಮಾನಿಕ ಸಿಡ್ನಿ ಕಾಟನ್, ಈ ಪ್ರಸಂಗದಲ್ಲಿ ಪಾಕಿಸ್ಥಾನ ಸರ್ಕಾರ ಹಸ್ತಕ್ಷೇಪ ಮಾಡಕೂಡದು ಎಂದು ಪಾಕಿಸ್ಥಾನ ಸರ್ಕಾರದ ವಿರುದ್ಧ ಕೊಟ್ಟಿದ್ದ ಇಂಜಕ್ಷನ್ ಅರ್ಜಿ ತಿರಸ್ಕೃತವಾಯಿತು.

ವುಡ್ ಲ್ಯಾಂಡ್ಸ್

26—7—48 ರಿಂ

ಹುಸ್ನೆಬಾನೊ — ಯಶ್ವಂತ ದ
ಪಾತ್ರವಹಿಸಿರುವ

ರಾಯಲ್ ಮೇಲ್

[ನೋಡಲೇಬೇಕಾದ

...ಮನೆಯ ಕಲ್ಯಾಣ
...ದರ್ಬಾರಿನಲ್ಲಿ ಶ್ರೀ
...ರು ಈ ಮುಂದೆ ಕಂಡ
...ಯರುಗಳಿಗೂ ಮಹಿಳೆ
...ಸಾರ್ವಜನಿಕ ಸೇವಾ
[ಪಬ್ಲಿಕ್ ಸರ್ವಿಸ್
...ಯಸಾಲಿಸಿದರು.

4. ಅಂಗತಟ್ಟ ನಂಜುಂಡಪ್ಪ, ಮನೆ ನಂಜುಂಡ ಶಾಸ್ತ್ರಿ, ಸಂಪಂಗಿ ರಾಮಯ್ಯ, 4 ಮಗ ...ಂಡೂಸಾ, 5 ಬಿ. ಚೂಡೇ ...ಡ, 6 ಕೆ. ಸಂಪದ್ಗಿರಿ ರಾವ್, 7 ಮೈ. ...ಯಂಗ್, 8 ಶ್ರೀಮತಿ ಭಗತ್, ...ಟಿ. ನಿರ್ವಾಣಪ್ಪ, 10 ಶ್ರೀಮತಿ ...ಸ್. ರತ್ನಮ್ಮ, 11 ಎಂ. ಮುನಿವೆಂಕ ...ಪ್ಪ, 12 ಹೆಗ್ಗೆರೆ ತಿಪ್ಪೆರುದ್ರಯ್ಯ, ...ಎಸ್. ಹನುಮಂತಪ್ಪ, 14 ಕೆ. ಪಿ ...ಮಯ್ಯ 15 ಚಲುವಯ್ಯ 16 ಎಂ. ...ಟ್ರಯ್ಯ, 17 ಕೆ. ಎಸ್. ಈಶ್ವರರಾವ್ ...ಸಿ, ಜಿ ವೆಂಕಟೇಶಯ್ಯ, 19 ಜಹಬ್ದುಲ್ ಲತೀಫ್, 20 ಬಿ. ಜಿ. ರಾಜ ...ಸೋಸಾಲ ಮೊದಲಿಯಾರ್, 21 ಮಿಸೆಸ್ ಕ್ಲಾರೆನ್ಸ್ ಟಾಲ್ಬರ್ಟ್, 22 ವೆಂಕ ...ರಮಯ್ಯ ಶೆಟ್ಟಿ, 23 ಹುಲೀಕೆರೆ ಶಾಂ ..., 24 ಹೊನ್ನಗಿರಿ ಗೌಡ, 25 ಮಲ ...ಶಿನರಾಮಶೆಟ್ಟಿ, 26 ಕಾಸಲ ಶ್ರೀ ...ಪಶೆಟ್ಟಿ, 27 ಮರುಳ ಸಿದ್ದಪ್ಪ, ... ಕೆ. ಶ್ರೀಕಂಠಯ್ಯ 29 ಮಂದಾಸ್ ...ತೋಪಯ್ಯ, 31 ಶ್ರೀಮತಿ ಬಿ. ಭೀ ...ಮಕ್ಕ 32 ಪುರಡಪ್ಪ 33 ಜನಾಬ್ ಜಿ ಎ. ಮಹಮದ್ ನಜೀರ್ 34 ಟಿ. ಎಸ್. ಸುಬ್ಬಯಾನ್ 35 ಹೆಚ್ ಕೆ. ಮುದ್ದೇ ಗೌಡ, 36 ಜನಾಬ್ ಜಿ. ಎ ಸಾಹಿಬ್ ...ಜಾ 37 ದಳವಾಯಿ ಬಸಲಿಂಗಪ್ಪ, 38 ಹೆಚ್ ನರಸಿಂಹಯ್ಯ 39 ಗೆಡ್ಡ ...ವೀರಣ್ಣ 40 ಶ್ರೀ॥ ಗಂಗಮ್ಮ 41 ಶ್ರೀ॥ ...ಗೌರಮ್ಮ 42 ಅಟದ ಪೆನ್ನಯ್ಯ ಮತ್ತು 43 ಕಲ್ಲಹಳ್ಳಿ ಕೊಂಗಲಪ್ಪ,

ಇವರಲ್ಲಿ 28 ಮತ್ತು 29ನೆ ಯವರೆಗೆ ಸ್ಕೌಟು ಪದಕಗಳನ್ನು ಕೊಡಲಾಗಿದೆ.

...ave the Cow

ಗೋವಧೆ ನಿಲ್ಲಲಿ

...Printed and Published
...rishna Rao at the
...ess, Chamaraj

...ಷ್ಟಿ ವ್ಯವಸಾಯ ಪದ್ಧತಿ

ಈ ಪದ್ಧತಿಯಿಂದ ಯಾವ ದೇಶಕ್ಕೂ ಸುಖವಿಲ್ಲವೆಂದೂ ಅದಕ್ಕಾಗಿಯೆ ಮದರಾಸು ಸರಕಾರವು ಈ ವಿಷಯವನ್ನು ಕುರಿತು ಆಲೋಚಿಸಿಲ್ಲವೆಂದೂ ಹಿಂದೆ ಅಲ್ಲಿಯ ಮಂತ್ರಿಯಾಗಿದ್ದ ಡಾ| ಸುಬ್ಬರಾಯನ್ನರು ಹೇಳಿರುವರು. ಅಷ್ಟೇ ಅಲ್ಲ. ನಮ್ಮ ದೇಶದಲ್ಲಿ ಬೆಲೆಗಳು ಅತಿಯಾಗಿ ಹೆಚ್ಚಿರುವುದೆಂದೂ, ಈ ಕಾರಣದಿಂದಲೇ ಸರಕಾರದ ಧಾನ್ಯಗಳ ಬೆಲೆಗಳನ್ನು ಹೆಚ್ಚಿಸಿರುವುದೆಂದೂ ಹೇಳಿರುವರು.

ರಷ್ಯಾದಲ್ಲಿ ಸಮಿಷ್ಟಿ ವ್ಯವಸಾಯ ಪದ್ಧತಿಯಲ್ಲಿ ಧಾನ್ಯವನ್ನು ಬೆಳೆಸುವರು. ಈಗ ರಷ್ಯಾದಲ್ಲಿ ಧಾನ್ಯಗಳ ಬೆಲೆಗಳನ್ನು ತಗ್ಗಿಸುತ್ತಿರುವರು. ಶೇಕಡ 50 ರಷ್ಟು ಬೆಲೆಗಳು ಬಿದ್ದುಹೋಗಿವೆ ಹಿಟ್ಟಿನ ಬೆಲೆಯು ಕಿಲೋಗ್ರಾಂಗೆ 40 ರೂಬಲ್ಸಿನಿಂದ 8 ಕ್ಕೆ ಇಳಿಸಿದ್ದಾರೆ. ಹೀಗೆಯೇ ರೊಟ್ಟಿ ಮತ್ತು ಇತರ ಧಾನ್ಯಗಳ ಬೆಲೆಗಳನ್ನೂ ತಗ್ಗಿಸಿದ್ದಾರೆ. ಈಗ ರಷ್ಯಾದಲ್ಲಿ ಜೀವಿತಕ್ಕೆ ಅವಶ್ಯಕವಾದ ಪದಾರ್ಥಗಳು ಬಹಳ ಸುಲಭವಾಗಿ ದೊರೆಯುತ್ತಿವೆ.

ಹೀಗಿರುವಾಗ ಸಮಿಷ್ಟಿ ವ್ಯವಸಾಯ ಪದ್ಧತಿಯಿಂದ ಯಾವ ದೇಶವೂ ಸುಖಿಸುವುದಿಲ್ಲವೆಂದು ಮಂತ್ರಿಗಳು ಹೇಗೆ ಹೇಳಿದರೋ ? (ಮಾ)

At Opera

31—7—48 ರಿಂದ

ವಿದ್ಯಾಪತಿ

(ತಮಿಳು)

ಟಿ. ಆರ್. ರಾಮಚಂದ್ರ

ಎಂ. ಆರ್ ಸ್ವಾಮಿನಾಥ್ ಭಾಗ್ಯಂ

ಟಿ. ಪ್ರೇಮಾವತಿ ನಂಬಿಯಾರ್

ಪಾತ್ರವಹಿಸಿರುವರು

.... ಪ್ರತಿದಿನ 3 ಆಟಗಳು ....

Morning Shows from 30-7-48

DOLL FACE

Change of Premises

ಆಫೀಸ್ ಬದಲಾವಣೆ

ರಾಜಧಾನಿಯ ಜಗನ್ಮೋಹನ ಬಂಗ್ಲೆ ಬೀದಿಯಲ್ಲಿದ್ದ ಅಡ್ವೊಕೇಟ್ ಬಿ. ಎ ಕೃಷ್ಣಸ್ವಾಮಯ್ಯಂಗಾರ್ಯರವರ ಆಫೀಸು, ವಾಣೀವಿಲಾಸ ಮಾರ್ಕೆಟ್ ಎದುರು ಶ್ರೀ ಶಾಮರಾಯರ ಮಹಡಿ

ಮುಪ್ಪಿನ ಕಾಲದ ಬಡತನ—

ಆಶ್ರಿತರ ರಕ್ಷಣೆಯ ಚಿಂತೆ—

ಈ ಸ್ವಾಭಾವಿಕ ಶತ್ರುಗಳ ಮೇಲೆ ವಿಜಯಪಡೆಯಲು ಅಪ್ರತಿಮ ಸಾಧನವು

ಜೀವವಿಮೆಯೊಂದೇ

ಆದುದರಿಂದ ಇಂದೇ

ಮೈಸೂರು ಸರಕಾರದ ವಿಮಾ ಇಲಾಖೆಯ ಪ್ರಜೆಗಳ ಶಾಖೆಯಲ್ಲಿ

ವಿಮೆ ಮಾಡಿರಿ

SHAKTI SUDHA

A Superb TONIC

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದ. ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳಪಿನಿಂದಲೂ, ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ ¼ ತೋಲಾ, ½ ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ivorce

£ SI

ıange — anteen

g Shows from 14—2—47 — JADE MASK

njit——— 3 rd Houseful Week

SHAHJEHAN

ಸೈಗಾಲ್, ಜೈರಾಜ್, ರಾಗಿನಿ, ನಸೀಂ ಪಾತ್ರವಹಿಸಿರುವ

ಷಹಜಹಾನ್

ಪ್ರತಿದಿನ 3 ಆಟಗಳು

ವ

ಪಾತ್ರ — ಬೆಂಜಾಮಿನ್

ಪ್ರ ಸಿ ದ್ಧ ಪ ತ್ರಿ ಕೆ

ಮೈಸೂರು ಸಿಟಿ ಪುರನಿವಾಸಿಗಳಿಗೆ ಈ ಮೂಲಕ ತಿಳಿಯಪಡಿಸುವುದೆಂದರೆ —

ಎಲೆಕ್ಟ್ರಿಕ್ ಇಲಾಖೆಯವರು ಬೆಳಗೊಳ ಮತ್ತು ಫಲ್ಟರ್‌ಬೆಡ್‌ಗಳಲ್ಲಿರುವ ಎಳು ಮೋಟಾರುಗಳನ್ನು ತಾ || 10–2–1947 ರ ಲಾಗಾಯ್ತು ಹದಿನೈದು ದಿವಸಗಳ ಕಾಲದಲ್ಲಿ ಪೋವರ್‌ಹಾಲ್ ಮಾಡುತ್ತಾರಾದ್ದರಿಂದ ಸದರಿ ಕಾಲದಲ್ಲಿ ನೀರು ಸರಬರಾಜು ಕಮ್ಮಿಯಾಗುತ್ತೆ. ನೀರು ಸಪ್ಲೈ ಆಗತಕ್ಕ ಕಾಲದಲ್ಲಿ ಎಲ್ಲರೂ ಸಾಕಾದಷ್ಟು ನೀರನ್ನು ಶೇಖರಿಸಿಕೊಳ್ಳತಕ್ಕದ್ದು.

ಕಾಂಗಾರಿ ಮುಗಿದನಂತರ ಮಾಮೂಲಿನಂತೆ ನೀರು ಸರಬರಾಜು ಮಾಡಲಾಗುತ್ತೆ.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ

ಪ್ರೆಸಿಡೆಂಟ್

ಮೈಸೂರು ಸಿಟಿ ಮುನಿಸಿಪ

ತಾ || 11—2—

ಸ್ಪೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ವಾಣಿವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಕ್ಕದಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ || 12–1–47 ನೇ ಮರ್ಕುಂ ಹರಾಜು ಇಸ್ತಿಹಾರ್ ನಾಮೆಯ ಪರತ್ಯುಗಳಿಗೆ ವಳಪಡಿಸಿ ತಾ || 16–2–1947 ನೇ ಭಾನುವಾರ ಬೆಳಿಗ್ಗೆ 9–30 ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ.

ಇತರ ವಿವರಗಳನ್ನು ಆಫೀಸಿನಲ್ಲಿ ರಜಾದಿನಗಳಲ್ಲದ ಇತರ ದಿವಸಗಳಲ್ಲಿ 11 ಘಂಟೆಯಿಂದ 5 ಘಂಟೆವಳಿಗೆ ತಿಳಿಯಬಹುದು.

(Sd) K. Venkatesha Iyer

For Chairman

City Improvement Trust Board, Mysore

ರಾ ಜ ಕ ಮ ಲ್, ಮೈ ಸೂ ರು

16–2–47 ರಿಂದ ಅಮೋಘ ಪ್ರಾರಂಭ — ಪ್ರತಿದಿನ 3 ಆಟಗಳು

ಕನ್ನಡಿಗರ ಹೆಮ್ಮೆಯ ಮೊದಲನೆ ಸ್ಟೂಡಿಯೋ ನವಜ್ಯೋತಿಯಲ್ಲಿ ತಯಾರಾದ

ಮಹಾತ್ಮಾ ಪಿಕ್ಚರ್ಸ್‌ರವರ ಮೊದಲನೇ ಕನ್ನಡ ಚಿತ್ರ

ಕೃ ಷ್ಣ ಲೀ ಲಾ

(Vijaya Agencies, Mysore)

ಭೂಮಿಕೆ — ಕೆಂಪರಾಜ್, ಬಳ್ಳಾರಿ ಲಲಿತ, ರತ್ನಮಾಲ, ಕಾಂತಾ, ರಾಘವೇಂದ್ರರಾವು, ಮಾಧವರಾವು, ಮಹಾಬಲರಾವ್